ದಿನಾಂಕಃ **09.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು **: 3** ನೇ ಪ್ರತಿವಾದಿಯ ಪರ ವಕೀಲರಿಂದಃ

01. ನನ್ನ ತಂದೆಯ ಸ್ವಂತ ಊರು ಅಮೀನಗಢ ಮತ್ತು ತಾಯಿಯ ಸ್ವಂತ ಊರು ಹಂಪಸಾಗರ. ದಾವಾ ಸ್ವತ್ತುಗಳು ನನ್ನ ತಾಯಿಯ ಆಸ್ತಿಗಳು. ನಾನು ನನ್ನ ತಂದೆಯ ಆಸ್ತಿಗಳ ಬಗ್ಗೆ ದಾವೆ ಸಲ್ಲಿಸಿಲ್ಲವೇ? ಎಂದರೆ ನನ್ನ ತಂದೆಗೆ ಯಾವುದೇ ಆಸ್ತಿಗಳು ಇರುವುದಿಲ್ಲ, ಅವರು ನನ್ನ ತಾಯಿಯ ಮನೆಗೆ ಮನೆ ಅಳಿಯತನಕ್ಕೆ ಬಂದಿದ್ದರು. ನನ್ನ ತಾಯಿಯ ತಂದೆಯ ಹೆಸರು ವಿರುಪಾಕ್ಷಯ್ಯ. ನನ್ನ ತಾಯಿಗೆ ದಾವಾ ಸ್ವತ್ತುಗಳು ಆಕೆಯ ತಂದೆಯಿಂದ ಬಂದಿದ್ದವು. ನನ್ನ ತಾಯಿಗೆ ಈ ದಾವಾ ಸ್ವತ್ತುಗಳು ಹೇಗೆ ಬಂದಿದ್ದವು? ಎಂಬ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿದ್ದೀನಾ? ಎಂದರೆ ನನ್ನ ತಾಯಿಗೆ ಆಕೆಯ ತಂದೆಯಿಂದ ಬಂದಿದ್ದವು ಎಂದು ಮಾತ್ರ ಗೊತ್ತು, ಆ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಸ. ನಂ. 209 ರಲ್ಲಿ 3 ಎಕರೆ 32 ಸೆಂಟ್ಸ್ ಮತ್ತು ಸ. ನಂ. 210 ರಲ್ಲಿ 7 ಎಕರೆ 50 ಸೆಂಟ್ಸ್ ಜಮೀನುಗಳು ನನ್ನ ತಾಯಿಗೆ ಹೇಗೆ ಬಂದಿದ್ದವು? ಎಂದರೆ ನನ್ನ ತಾಯಿಯ ತಂದೆಯಿಂದ ಬಂದಿದ್ದವು. ನಾನು ಹೇಳುತ್ತೇನೆ, ನನ್ನ ಅಜ್ಜನಿಗೆ ಗಂಡುಮಕ್ಕಳು ಇರಲಿಲ್ಲವಾದ್ದರಿಂದ ಎಲ್ಲಾ ಆಸ್ತಿಯನ್ನೂ ನನ್ನ ತಾಯಿಯ ಹೆಸರಿಗೆ ಮಾಡಿದ್ದಾರೆ. ಮೇಲ್ಕಂಡ ಎರಡು ಜಮೀನುಗಳನ್ನು ನನ್ನ ತಾಯಿಯ ತಂದೆಯವರು ದಿನಾಂಕ 13.11.1961 ರಲ್ಲಿ 1 ಮತ್ತು 3 ನೇ ಪ್ರತಿವಾದಿಗಳು ಮೈನರ್ ಗಳಾಗಿದ್ದಾಗ ಅವರ ತಾಯಿಯನ್ನು ಗಾರ್ಡಿಯನ್ ಮಾಡಿ 1 ಮತ್ತು 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅವುಗಳನ್ನು ಮಾರಾಟ ಮಾಡಿದ ಲಿಂಗದಳ್ಳಿ ಅನ್ನದಾನಪ್ಪ ಸದರಿ ಆಸ್ತಿಗಳನ್ನು ಕೋರ್ಟ್ ಹರಾಜಿನಲ್ಲಿ ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ತೋರಿಸಿದ ಸ. ನಂ. 209 ಮತ್ತು 210 ರ ಸಬ್ ನಂಬರ್ ಆಸ್ತಿಗಳನ್ನೂ ಕೂಡಾ ನನ್ನ ತಾಯಿಯ ತಾಯಿಯನ್ನು ಗಾರ್ಡಿಯನ್ ಮಾಡಿ ನನ್ನ ತಾಯಿಯ ತಂದೆಯು 1 ಮತ್ತು 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

02. ನಾನು 07.06.1966 ರಂದು ಹುಟ್ಟಿದ್ದೇನೆ. ನಾನು ಹುಟ್ಟುವ ಮುಂಚೆಯೇ ದಾವಾ ಸ್ವತ್ತುಗಳನ್ನು 1 ಮತ್ತು 3 ನೇ ಪ್ರತಿವಾದಿಗಳ ಹೆಸರುಗಳಲ್ಲಿ ಮೈನರ್ ಗಾರ್ಡಿಯನ್ ನೇಮಕ ಮಾಡಿ ಖರೀದಿ ಮಾಡಿದ್ದಾರೆ ಎಂದರೆ ಎಲ್ಲಾ ಸುಳ್ಳು. ನನ್ನ ಮತ್ತು ನನ್ನ ಅಕ್ಕನ ಮದುವೆಗಳನ್ನು ನನ್ನ ತಂದೆಯೇ ಮಾಡಿದ್ದರು. ನಮ್ಮ ಮದುವೆಗಳನ್ನು 1 ಮತ್ತು 3 ನೇ ಪ್ರತಿವಾದಿಗಳೇ ಮಾಡಿದ್ದರು ಎಂದರೆ ಇಲ್ಲ, ನನ್ನ ತಂದೆಯೇ ಮಾಡಿದ್ದರು. ನನ್ನ ಅಣ್ಣ 1 ನೇ ಪ್ರತಿವಾದಿ ವಿರುಪಾಕ್ಷಯ್ಯ ಹೈಸ್ಕೂಲ್ ಟೀಚರ್ ಆಗಿದ್ದರು.

1 ನೇ ಪ್ರತಿವಾದಿ ನನ್ನ ಮದುವೆ ಮಾಡಲು ಎಸ್.ಬಿ.ಐ ನಲ್ಲಿ ಸಾಲ ಮಾಡಿ ತನ್ನ ವೇತನದಲ್ಲಿ ಅದನ್ನು ತೀರುವಳಿ ಮಾಡಿದ್ದಾರೆ ಎಂದರೆ ಆ ಸಾಲವನ್ನು ಅವರ ಮಕ್ಕಳನ್ನು ಸಾಫ್ಟವೇರ್ ಇಂಜಿನಿಯರ್ ಓದಿಸಲು ಮಾಡಿದ್ದಾರೆ. ನನ್ನ ಮದುವೆ ಮಾಡಿದಾಗ 1 ನೇ ಪ್ರತಿವಾದಿಗೆ ಮಕ್ಕಳು ಹುಟ್ಟಿರಲೇ ಇಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಒಂದು ಆಸ್ತಿ ಖರೀದಿ ಮಾಡಿದ್ದರು ಎನ್ನುತ್ತಾರೆ. ನಾನು ಈ ವಿಚಾರದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಇರುವಾಗ ನನಗೆ ಮತ್ತು ನನ್ನ ಅಕ್ಕನಿಗೆ ವಿದ್ಯಾಭ್ಯಾಸಕ್ಕಾಗಿ ಹಂಪಸಾಗರ ಗ್ರಾಮೀಣ ಬ್ಯಾಂಕಿನಲ್ಲಿ ಸಾಕಷ್ಟು ಸಾಲಗಳನ್ನು ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಇರುವಾಗ ಆ ಸಾಲ ತೀರಿಸಿರಲಿಲ್ಲವಾದ್ದರಿಂದ ನನ್ನ ಅಣ್ಣ 3 ನೇ ಪ್ರತಿವಾದಿ ಸದರಿ ಸಾಲಗಳನ್ನು ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನನ್ನು ಮತ್ತು ನನ್ನ ಅಕ್ಕನನ್ನು ಶ್ರೀಮಂತರ ಮನೆಗೆ ಮದುವೆ ಮಾಡಿ ಕೊಟ್ಟು, ಇನ್ನೊಬ್ಬ ಅಕ್ಕನಿಗೆ ಬಡವರ ಮನೆಗೆ ಕೊಟ್ಟು ಮದುವೆ ಮಾಡಿದ್ದರಿಂದ ನನ್ನ ತಾಯಿಯು ಸದರಿ ಅಕ್ಕನಿಗೆ 2 ಎಕರೆ ಜಮೀನು ಕೊಡುತ್ತೇನೆಂದು ಹೇಳಿದ್ದರು ಎಂದರೆ 2 ಎಕರೆ 64 ಸೆಂಟ್ಸ್ ಜಮೀನನ್ನು ತನ್ನ ಅಣ್ಣಂದಿರು ನಮಗೆ ಗೊತ್ತಾಗದಂತೆ ನನ್ನ ಅಕ್ಕ ಚೆನ್ನಬಸಮ್ಮನಿಗೆ ಕೊಟ್ಟಿದ್ದಾರೆ. ನನ್ನ ತಾಯಿ ಹೇಳಿದ ಪ್ರಕಾರವೇ ನನ್ನ ಅಣ್ಣಂದಿರು ಚೆನ್ನಬಸಮ್ಮನಿಗೆ 2 ಎಕರೆ 64 ಸೆಂಟ್ಸ್ ಜಮೀನು ಕೊಟ್ಟಿದ್ದಾರೆ ಮತ್ತು ಆ ವಿಚಾರ ನನಗೆ ಗೊತ್ತಿದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ನನ್ನ ಅಕ್ಕ ಚೆನ್ನಬಸಮ್ಮನ ಮಗಳಾದ 4 ನೇ ಪ್ರತಿವಾದಿ ಮಂಗಳಗೌರಮ್ಮನು ಸದರಿ ಜಮೀನನ್ನು ದಿನಾಂಕ 17.02.2014 ರಂದು 5 ನೇ ಪ್ರತಿವಾದಿ ಶ್ರೀಮತಿ ವಿಜಯಾ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಅವರು ಏನನ್ನೂ ಹೇಳಿಲ್ಲ. 1 ಮತ್ತು 3 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳ ಕುರಿತಾಗಿ ದಿನಾಂಕ 10.10.2000 ರಂದು ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಅದರ ಬಗ್ಗೆ ತಿಳಿಸಿಲ್ಲ. ನನಗೆ ಅವರು ತಿಳಿಸಿದ್ದರೂ ಆಗ ನಿಮ್ಮ ಆಸ್ತಿ ನೀವು ಹಂಚಿಕೊಳ್ಳಿ ಎಂದು ಅವರಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಆ ರೀತಿ ಪಾಲುವಿಭಾಗ ಆದ ನಂತರ ದಿನಾಂಕ 21.01.2003 ರಂದು 1 ಮತ್ತು 3 ನೇ ಪ್ರತಿವಾದಿಗಳ ಹೆಸರುಗಳಿಗೆ ಪಹಣಿ ಕೂಡಾ ನಮುದಾಗಿವೆ ಎಂದರೆ ದಾವೆ ಹಾಕುವವರೆಗೆ ನನಗೆ ಆ ವಿಚಾರ ಗೊತ್ತಿರಲಿಲ್ಲ. ದಾವೆ ಹಾಕುವ ಕಾಲಕ್ಕೆ ಪಹಣಿಗಳು ಯಾರ ಹೆಸರಿನಲ್ಲಿ ಇದ್ದವು? ಎಂದರೆ 1 ಮತ್ತು 3 ನೇ ಪ್ರತಿವಾದಿಗಳ ಹೆಸರುಗಳಲ್ಲಿ ಇದ್ದವು. ಐಟಂ ನಂ. (ಇ) ಆಸ್ತಿಯನ್ನು ತನ್ನ ಕಷ್ಟಗಳಿಗಾಗಿ 1 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಮಾರಾಟ ಮಾಡುವ ಬಗ್ಗೆ ಹೇಳಿಲ್ಲ. ನಮ್ಮ ತಂದೆ ಇರುವಾಗ ಮಾಡಿಕೊಂಡ ಸಾಲಗಳನ್ನು ತೀರಿಸಲು ನನ್ನ ಅಣ್ಣಂದಿರು ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಅವರ ಮಕ್ಕಳನ್ನು ಓದಿಸಲು ಸಾಲ ಮಾಡಿದ್ದೇವೆಂದು ನನಗೆ ಹೇಳಿದ್ದರು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 35 ವರ್ಷಗಳ ಹಿಂದೆ ಮತ್ತು ನನ್ನ ತಾಯಿ 25 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಅವರ ಮರಣ

ದಿನಾಂಕಗಳನ್ನು ತೋರಿಸುವ ಮರಣ ಪ್ರಮಾಣ ಪತ್ರಗಳನ್ನು ನಾನು ಹಾಜರು ಮಾಡಿಲ್ಲ. ನನ್ನ ತಾಯಿ ಇಸವಿ 2000 ರಲ್ಲಿ ಮತ್ತು ನನ್ನ ತಂದೆ ಅದಕ್ಕಿಂತ 10 ವರ್ಷ ಮುಂಚೆ ತೀರಿಕೊಂಡಿದ್ದಾರೆ.

03. ದಾವೆ ಹಾಕುವ ಮುಂಚೆ ನಾನು ಹಂಪಸಾಗರಕ್ಕೆ ಬಂದು-ಹೋಗುತ್ತಿದ್ದೆ ಎಂದರೆ ಹೌದು, ಅವರು ನನಗೆ ಏನೂ ಹೇಳಿಲ್ಲ. ಆಗ ನನ್ನ ತಂದೆ-ತಾಯಿ ಸಾಕಷ್ಟು ಸಾಲಗಳನ್ನು ಮಾಡಿಕೊಂಡ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸಾಲ ಇರಲಿಲ್ಲ. ನನ್ನ ತಾಯಿ ಇರುವಾಗ ಜಮೀನಿನಲ್ಲಿ ಬೋರವೆಲ್ ಇರಲಿಲ್ಲ ಎಂದರೆ ದೊಡ್ಡ ಬೋರವೆಲ್ ಇತ್ತು. ಇತ್ತೀಚೆಗೆ 10 ವರ್ಷಗಳ ಹಿಂದೆ ಪ್ರತಿವಾದಿಗಳು ಬೋರವೆಲ್ ಕೊರೆಸಿದ್ದಾರೆ ಎಂದರೆ ಇವರು ಹೆಚ್ಚುವರಿಯಾಗಿ ಕೊರೆಸಿರಬಹುದು ಆದರೆ ಹಳೆ ಬೋರವೆಲ್ ಇತ್ತು. ಬೋರವೆಲ್ ಕೊರೆಯಿಸಲು ಪ್ರತಿವಾದಿಗಳು ಸಾಲಗಳನ್ನು ಮಾಡಿಕೊಂಡಿದ್ದರು ಎಂದರೆ ಇರಬಹುದು, ಅವರು ನನಗೆ ಅದರ ಬಗ್ಗೆ ಹೇಳಿಲ್ಲ. 3 ನೇ ಪ್ರತಿವಾದಿ ತನ್ನ ಮಗನ ಹೆಸರಿಗೆ 4 ಎಕರೆಯನ್ನು ದಾನ ಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ ದಾವೆ ಹಾಕುವ ಮುಂಚೆ ದಾಖಲೆಗಳನ್ನು ತೆಗೆದುಕೊಂಡಾಗ ಆ ವಿಚಾರ ಗೊತ್ತಾಯಿತು. ನನ್ನ ತಾಯಿ ತೀರಿಕೊಳ್ಳುವಾಗ ಆಕೆಯ ಮೈಮೇಲೆ 15 ತೊಲಾ ಬಂಗಾರವಿತ್ತು ಎಂದರೆ ಯಾವುದೂ ಇರಲಿಲ್ಲ. 15 ತೊಲಾ ಬಂಗಾರವನ್ನು ನಾನೇ ತೆಗೆದುಕೊಂಡಿದ್ದೆ ಎಂದರೆ ಸುಳ್ಳು. ದಾವೆ ಹಾಕುವಾಗ ಸ್ವತ್ತುಗಳ ಮೌಲ್ಯವನ್ನು ಹೆಚ್ಚಾಗಿ ತೋರಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಇವುಗಳು ನನ್ನ ತಾಯಿಯ ಸ್ವಂತ ಆಸ್ತಿಗಳಾಗಿದ್ದರಿಂದ ಆಕೆಯು 1 ಮತ್ತು 3 ನೇ ಪ್ರತಿವಾದಿಗಳ ಹೆಸರುಗಳಿಗೆ ರಿಜಿಸ್ಟರ್ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುತ್ತೇನೆ, ನನ್ನ ತಾಯಿ ತೀರಿಕೊಂಡ ನಂತರ ಇವರೇ ತಮ್ಮ ಹೆಸರುಗಳಿಗೆ ಮಾಡಿಸಿಕೊಂಡಿದ್ದಾರೆ. ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದಿದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲು **: 7** ನೇ ಪ್ರತಿವಾದಿಯ ಪರ ವಕೀಲರಿಂದಃ

04. ದಾವಾ ಐಟಂ ನಂ. (ಸಿ) ಆಸ್ತಿಯ ಖಾತೆಯು 2002-03 ನೇ ಇಸವಿನಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ನಮೂದಾಗಿತ್ತು ಎಂದರೆ ನಮಗೆ ಹೇಳದೇ ಮಾಡಿಸಿಕೊಂಡಿದ್ದರು. ಖಾತೆಯು ವಿಭಾಗ ಮಾಡಿಕೊಂಡ ಪ್ರಕಾರ ಅವರ ಹೆಸರಿಗೆ ನಮೂದಾಗಿತ್ತು ಎಂದರೆ ನಮಗೆ ಹೇಳಿಲ್ಲ. ಹಕ್ಕು ಬದಲಾವಣೆ ಮಾಡುವಾಗ ನಾನು ತಕರಾರು ಸಲ್ಲಿಸಿದ್ದುಂಟೇ? ಎಂದರೆ ನಮಗೆ ಹೇಳಿರಲಿಲ್ಲ ಮತ್ತು ನಮಗೆ ಇವತ್ತಲ್ಲ ನಾಳೆ ಕೊಡುತ್ತಾರೆ ಎಂದುಕೊಂಡು ಸುಮ್ಮನೇ ಇದ್ದೆ. ದಿನಾಂಕ 04.04.2013 ರಂದು 1 ನೇ ಪ್ರತಿವಾದಿಯು ಐಟಂ ನಂ. (ಸಿ) ಆಸ್ತಿಯನ್ನು ಕೊಟ್ರಯ್ಯ ಎನ್ನುವವರಿಗೆ

ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟ ಆದಾಗ ಮತ್ತು ಕ್ರಯದ ಪ್ರಕಾರ ಹಕ್ಕು ಬದಲಾವಣೆ ಮಾಡುವಾಗ ನಾನು ತಕರಾರು ಮಾಡಿರಲಿಲ್ಲ ಎಂದರೆ ನನ್ನನ್ನು ಕರೆದಿರಲಿಲ್ಲ. 2002-03 ನೇ ಇಸವಿಯಲ್ಲಿ ಖಾತೆಯು 1 ನೇ ಪ್ರತಿವಾದಿ ಹೆಸರಿಗೆ ನಮೂದಾಗಿದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ನನಗೆ ತಿಳಿಸಿರಲಿಲ್ಲ. ಆ ರೀತಿ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಇರುವುದನ್ನು ಪರಿಶೀಲಿಸಿ ಪಾಲುವಿಭಾಗದ ಪ್ರಕಾರ 1 ನೇ ಪ್ರತಿವಾದಿಗೆ ಆಸ್ತಿ ಬಂದಿರುವುದರಿಂದ 7 ನೇ ಪ್ರತಿವಾದಿಯ ಗಂಡ ಐಟಂ ನಂ. (ಸಿ) ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ನನ್ನನ್ನು ಕರೆದಿರಲಿಲ್ಲ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ*** ಮುಂದುವರೆದ ***ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

**ಮಧ್ಯಾಹ್ನ 2.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 7 ನೇ ಪ್ರತಿವಾದಿಯ ಪರ ವಕೀಲರಿಂದಃ**

05. 2020 ರಲ್ಲಿ ಕೊಟ್ರಪ್ಪ ತೀರಿಕೊಂಡ ನಂತರ 7 ನೇ ಪ್ರತಿವಾದಿ ಪೌತಿ ಖಾತೆ ಬದಲಾವಣೆ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಗೊತ್ತಿಲ್ಲ, ಮೋಸ ಮಾಡಿ ಖಾತೆ ಮಾಡಿಸಿಕೊಂಡಿದ್ದಾರೆ. ನಾನು ಆ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2006-07 ರಲ್ಲಿ 1 ನೇ ಪ್ರತಿವಾದಿಗೆ ಕಷ್ಟವಿದ್ದರಿಂದ ಐಟಂ ನಂ. (ಸಿ) ಆಸ್ತಿಯನ್ನು ಅಡವಿಟ್ಟು ಗ್ರಾಮೀಣ ಬ್ಯಾಂಕಿನಲ್ಲಿ ರೂ. 1 ಲಕ್ಷ ಸಾಲ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೊಟ್ರಪ್ಪನಿಗೆ ಮಾರಾಟ ಮಾಡಿ ಬಂದ ಹಣದಿಂದ 1 ನೇ ಪ್ರತಿವಾದಿ ಸದರಿ ಸಾಲವನ್ನು ತೀರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರಿಂದಲೇ ನಾನು ಆ ಸಮಯಗಳಲ್ಲಿ ಯಾವುದೇ ತಕರಾರು ಮಾಡಿರಲಿಲ್ಲ ಎಂದರೆ ನನಗೆ ಹೊಲ ಕೊಡುತ್ತೇನೆ ಎಂದು ಹೇಳಿದ್ದರಿಂದ ಸುಮ್ಮನಿದ್ದೆ. ಐಟಂ ನಂ. (ಸಿ) ಆಸ್ತಿಯನ್ನು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿರುವುದರಿಂದ ನನಗೆ ಅದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನನಗೆ ಮೋಸ ಮಾಡಿದ್ದಾರೆ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸುಳ್ಳು ದಾವೆ ಹಾಕಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ